ಮತ್ತೊಂದು ದಸರೆಯ ಸಂಭ್ರಮಕ್ಕೆ ಮೈಸೂರು ಸಜ್ಜಾಗಿದೆ. ಪ್ರತಿವರ್ಷದ ಚಿನ್ನದ ಅಂಬಾರಿಯ ಸಂಭ್ರಮವಷ್ಟೇ ಅಲ್ಲ, ಸಾಂಸ್ಕೃತಿಕ ಜಾಗೃತಸ್ಥಳವಾಗಿ, ನೆಮ್ಮದಿಯ ತಾಣವಾಗಿ, ವಿದ್ಯಾಕೇಂದ್ರವಾಗಿ ಮೈಸೂರಿಗೆ ಹಲವು ಗುರುತುಗಳಿವೆ. ನಿವೃತ್ತರಿಗೆ, ಹೆಣ್ಣುಮಕ್ಕಳಿಗೆ, ವಿದ್ಯಾರ್ಥಿಗಳಿಗೆ ಸುರಕ್ಷಿತ ತಾಣ ಎಂದೇ ಹೇಳಲಾಗುತ್ತಿದ್ದ ಈ ಊರು ನಿಧಾನಕ್ಕೆ ತನ್ನ ಪೊರೆಯನ್ನು ಕಳಚಿಕೊಳ್ಳುತ್ತಿದೆ. ಒಂದೆಡೆ ಆಧುನಿಕತೆಯ ಕೋರೆ, ಮತ್ತೊಂದೆಡೆ ಅಪರಾಧಕೃತ್ಯಗಳ ದಾಡೆ ಎರಡರ ನಡುವೆ ಮೈಸೂರು ತನ್ನ ಜೀವನ್ಮುಖಿ ಗುಣವನ್ನು ಕಳೆದುಕೊಳ್ಳುತ್ತಿದೆಯೇ ಎಂಬ ಆತಂಕ ಅಲ್ಲಿನ ಸಹೃದಯರನ್ನು ಕಾಡುತ್ತಿದೆ. ದಸರಾ ಹಬ್ಬದ ಸಂಭ್ರಮದ ಜೊತೆಗೆ ನಗರದ ಒಳಗುದಿಗಳ ಕಡೆಗೊಂದು ಇಣುಕುನೋಟ ಬೀರುವ ಪ್ರಯತ್ನ, ಈ ವಾರದ 'ಸುಧಾ' ವಿಶೇಷ.



■ ಕೆ.ಓಂಕಾರ ಮೂರ್ತಿ

ಚಿತ್ರಗಳು: ಸವಿತಾ ಬಿ.ಆರ್